**ಓ.ಎಸ್. ನಂ. 45/202021** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 4.8.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಆರ್ ವಕೀಲರಿಂದಃ</u>

ನನ್ನ ಮಾವನಾದ ವಾದಿಯು 40-50 ವರ್ಷಗಳಿಂದ ಶಬರಿಮಲೆಯ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದಾರೆ ಎಂದರೆ ಸರಿ. ಅವರು ಗೌರವಯುತವಾಗಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯು 40*27 ಅಡಿ ನಿವೇಶನವನ್ನು ಬೇರೆಯವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ1 ರಲ್ಲಿ ಪಳನಿಸ್ವಾಮಿ ರವರಿಗೆ ಸದರಿ ಆಸ್ತಿಯು ಕ್ರಯಪತ್ರದ ಮೂಲಕ ಬಂದಿರುತ್ತದೆ ಎಂದು ಅವರೇ ಹೇಳಿ ಬರೆಸಿರುತ್ತಾರೆ. ಆ ರೀತಿ ನಿಡಿ1 ರಲ್ಲಿ ಬರೆಸುವಾಗ ನಾನು ನೋಡಿರುತ್ತೇನೆ. ಸಾಕ್ಷಿದಾರರು ನಿಡಿ1 ದಾಖಲೆಯಾದ ನಂತರ ತಿಳಿದುಕೊಂಡಿರುತ್ತೇನೆ ಎನ್ನುವರು. ವಾದಿಯು ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ಅವರಿಗೆ ಈಗ 72 ವರ್ಷವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಶ್ರವಣದೋಷ ಇರುತ್ತದೆ ಎಂದರೆ ಸಾಕ್ಷಿದಾರರು ಕಿವಿಗೆ ಮಿಶನ್ ಹಾಕಿಕೊಂಡಿರುತ್ತಾರೆ ಎನ್ನುವರು. ಅವರಿಗೆ ಕಣ್ಣಿನ ದೋಷ ಇರುತ್ತದೆ ಎಂದರೆ ಸಾಕ್ಷಿದಾರರು ಕನ್ನಡಕ ಹಾಕಿಕೊಂಡಿರುತ್ತಾರೆ ಎನ್ನುವರು. ಅವರಿಗೆ ಕಿವಿಗೆ ಮಿಶನ್ ಹಾಕಿಕೊಳ್ಳದಿದ್ದರೆ ಹಾಗೂ ಕನ್ನಡಕ ಹಾಕಿಕೊಳ್ಳದಿದ್ದರೆ ಸಾಮಾನ್ಯ ಜೀವನ ನಡೆಸಲು ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಅವರು ವರ್ಕಶಾಪ್ ನಡೆಸುತ್ತಿದ್ದರು ಎನ್ನುವರು.

ಸಂಪೂರ್ಣ ಆಸ್ತಿಯ ಪೈಕಿ 20*39 ಅಡಿ ಆಸ್ತಿಯನ್ನು ವಾದಿಯು ರೇಣುಕಾ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರಾಟ ಮಾಡಿರುತ್ತಾರೆ, ಯಾರಿಗೆ ಎಂದು ಗೊತ್ತಿರುವುದಿಲ್ಲ ಎನ್ನುವರು ಆ ರೀತಿ ದಿನಾಂಕ 16.2.2015 ರಂದು ರೂ. 8,97,000/- ಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಮೇಲೆ ಹೇಳಿದಂತೆ ಆಸ್ತಿ ಮಾರಾಟ ಮಾಡಿರುವ ವಿಚಾರ ನನ್ನ ಹೆಂಡತಿಗೆ ಗೊತ್ತಿರುವುದಿಲ್ಲ. ನನ್ನ ಹೆಂಡತಿಯ ಹೆಸರು ಸುಮಲತಾ ಆಗಿರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಭಾವಚಿತ್ರ ಮತ್ತು ಸಹಿ ನನ್ನ ಹೆಂಡತಿಯದ್ದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿದಾರರು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ10 ಎಂದು, ಭಾವಚಿತ್ರ ಮತ್ತು ಸಹಿ ಇರುವ ಭಾಗವನ್ನುನಿಪಿ10 ಎ ಎಂದು ಗುರುತಿಸಲಾಯಿತು. ನಿಪಿ10 ರಲ್ಲಿ ನನ್ನ ಹೆಂಡತಿ, ವಾದಿ ಮತ್ತು ಇನ್ನಿಬ್ಬರು ಮಕ್ಕಳು ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ ನಂತರ ನನ್ನ ಹೆಂಡತಿ ಮಾಡುತ್ತಿದ್ದ ಎಲ್ಲ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿದಾರರು ಕೆಲವುಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವರು. ನನಗೂ ನನ್ನ ಹೆಂಡತಿಗೂ ಆಗಾಗ ಮನಸ್ತಾಪ ಇರುತ್ತದೆ. ಈಗ ಚನ್ನಾಗಿರುತ್ತೇವೆ. ನಿಡಿ1 ರಲ್ಲಿ ನೆಲಮಹಡಿಯನ್ನು ಮಾತ್ರ ರೂ. 9,65,000/- ಗಳಿಗೆ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಮೊದಲು ಗೊತ್ತಿಲ್ಲ ಎಂದು ಉತ್ತರಿಸಿ, ನಂತರ ಸಂಪೂರ್ಣ ಕಟ್ಟಡವನ್ನು ನೋಂದಣಿ ಮಾಡಿಕೊಟ್ಟಿರುತ್ತಾರೆ ಎನ್ನುವರು. ನಿಡಿ1 ಕ್ರಯಪತ್ರವನ್ನು ನಿಡಿ3 ಮತ್ತು 4 ಖಾತಪತ್ರದ ಆಧಾರದ ಮೇಲೆ ಬರೆಸಿಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುವರು. ಯಾವ ಆಧಾರದ ಮೇರೆಗೆ ಕ್ರಯಪತ್ರ ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ವಾದಿಯೇ ಅಸೆಸಮೆಂಟ್ ರಿಜಿಸ್ಟರ್ ಮತ್ತು ಖಾತಪತ್ರ ತಂದಿರುತ್ತಾರೆ

ಎನ್ನುವರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ವಾದಿಯು ಸಂಪೂರ್ಣ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಒಬ್ಬ ಮಗನಾದ ವಿಜಯಭಾಸ್ಕರ ಬೇರೆಯಾಗಿ ವಾಸ ಮಾಡಿಕೊಂಡಿದ್ದರು ಎನ್ನುವರು. ಸದರಿ ವಿಜಯಭಾಸ್ಕರ ಮಿಲಿಟರಿಯಲ್ಲಿರುತ್ತಾರೆ ಎಂದರೆ ಸರಿ. ಅವರು ಮಿಲಿಟರಿಯಲ್ಲಿದ್ದ ಕಾರಣ ಕ್ವಾಟ್ರಸ್‌ನಲ್ಲಿ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ. ಅವರಿಗೆ ಓಡಾಡಲು ತೊಂದರೆಯಾಗುತ್ತದೆ ಎಂದು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ವಾಸವಾಗಿದ್ದರು ಎಂದರೆ ಅವರು ಬೇರೆ ಸ್ವಂತ ಮನೆ ಮಾಡಿಕೊಂಡಿರುತ್ತಾರೆ ಎನ್ನುವರು. ವಾದಿ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ, ಅವರ ಮಕ್ಕಳು ಹಾಗೂ ಅವರ ಸೊಸೆ ಅನ್ಯೋನ್ಯವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮಗನಾದ ಕೃಷ್ಣನು ಅವರ ಮಗಳ ಶಾಸ್ತ್ರ ಕಾರ್ಯವನ್ನು ದಾವಆಸ್ತಿಯ 2 ನೇ ಮಹಡಿಯಲ್ಲಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮಗ ಕೃಷ್ಣ ಅವರ ಹೆಂಡತಿ ಮಕ್ಕಳ ಜೊತೆ 2 ನೇ ಮಹಡಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ವಿದ್ಯುಚ್ಚಕ್ತಿ ಬಿಲ್ 2 ನೇ ಮಹಡಿ ಮನೆಯ ವಿದ್ಯುಚ್ಚಕ್ತಿ ಬಿಲ್ ಆಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಪಿ11 ಮತ್ತು ನಿಪಿ12 ಎಂದು ಗುರುತಿಸಲಾಯಿತು. ಈಗಲೂ ಸಹ ಸದರಿ ವಿದ್ಯುಚ್ಚಕ್ತಿ ಮೀಟರ್ ವಾದಿಯ ಹೆಸರಿನಲ್ಲಿದ್ದು, ಅವರ ಮಗ ವಿದ್ಯುತ್ ಬಿಲ್‌ನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು 24 ಲಕ್ಷವನ್ನು ಕೊಟ್ಟು ನಿಡಿ1 ಕ್ರಯಪತ್ರವನ್ನು ಬರೆಸಿಕೊಂಡಿರುತ್ತೇನೆ. ಸದರಿ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುತ್ತೇನೆ. ಯಾವ ಯಾವ ದಿನಾಂಕದಂದು ನೀಡಿರುತ್ತೇನೆ ಎಂದು ತಕರಾರಿನಲ್ಲಿ ಹೇಳಿರುವುದಿಲ್ಲ. 24 ಲಕ್ಷ ನೀಡಿರುವ ಬಗ್ಗೆ ಇದೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿದಾರರು ಪ್ರಥಮ ಬಾರಿಗೆ ಕೇಳುತ್ತಿದ್ದು, ಹೇಳುತ್ತಿದ್ದೇನೆ ಎನ್ನುವರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪಂಚಾಯಿತಿ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿಯಲ್ಲಿ ಯಾರೆಲ್ಲ ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿದಾರರು ಮುಂದುವರಿದು ವಾದಿಯೇ ಕರೆದುಕೊಂಡು ಬಂದಿರುತ್ತಾರೆ ಎನ್ನುವರು. ಯಾವುದೇ ಪಂಚಾಯಿತಿ ನಡೆದಿರುವುದಿಲ್ಲ, ಆ ಕಾರಣ ನನಗೆ ಪಂಚಾಯಿತಿ ನಡೆದ ದಿನಾಂಕ ಮತ್ತು ಪಂಚಾಯಿತಿಯಲ್ಲಿದ್ದವರ ಹೆಸರು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ನಡುವೆ 4 ಬಾರಿ ಪಂಚಾಯಿತಿಯಾಗಿರುತ್ತದೆ. ಅವರ ಹೆಸರನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ, ಸಾಕ್ಷಿದಾರರು ಮುಂದುವರಿದು ನಾನು ಆ ಊರಿಗೆ ಹೊಸಬನಾಗಿರುತ್ತೇನೆ ಎನ್ನುವರು. ಆಸ್ತಿ ಖರೀದಿಯ ಮಾತುಕತೆಯಾದಾಗ ವಾದಿಸಾಕ್ಷಿ-2 ರವರು ಬಂದಿದ್ದರು ಎಂದರೆ ಸರಿಯಲ್ಲ. ವಾದಿಸಾಕ್ಷಿ-2 ರವರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ವಾದಿಸಾಕ್ಷಿ-2 ರವರು ಸಹ ಮಾತುಕತೆಗೆ ಬಂದು ನೆಲಮಹಡಿಗೆ ಸಂಬಂಧಪಟ್ಟಂತೆ ಮಾತ್ರ ನಾನು, ವಾದಿ ಹಾಗೂ ವಾದಿಸಾಕ್ಷಿ-2 ರವರು ಮಾತುಕತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಭೋಗ್ಯದಾರರಿಗೆ 3.5 ಲಕ್ಷ ಹಣವನ್ನು ನಿಡಿ1 ದಾಖಲೆಯಾದ 2-3 ತಿಂಗಳ ನಂತರ ಕೊಟ್ಟಿರುತ್ತೇನೆ. ನನಗೆ ಮಾರಾಟ ಮಾಡಿರುವ ನೆಲಮಹಡಿಯಲ್ಲಿ ಸದರಿ ಭೋಗ್ಯದಾರರು ಭೋಗ್ಯಕ್ಕೆ ಇದ್ದರು ಎಂದರೆ ಸರಿ. ಸದರಿ

ಬೋಗ್ಯದಾರರು ನಾನು ಬೋಗ್ಯದ ಹಣ ನೀಡಿದ ನಂತರ ಅವರು ಸದರಿ ನೆಲ ಮಹಡಿಯನ್ನು ಖಾಲಿ ಮಾಡಿರುತ್ತಾರೆ. ಬೋಗ್ಯದಾರರು ಖಾಲಿ ಮಾಡಿದ 1-2 ತಿಂಗಳ ನಂತರ ನಾನು ಸದರಿ ನೆಲಮಹಡಿಯ ವಾಸಕ್ಕೆ ಹೋಗಿರುತ್ತೇನೆ. ಅಲ್ಲಿಯವರಗೆ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.